**ಸಾಕ್ಷಿಯನ್ನು ದಿನಾಂಕಃ 04.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಎಮ್ ಎನ್ ಆರ್ ವಕೀಲರಿಂದಃ**

ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಸದರಿ ನೋಂದಾಯಿತ ಕ್ರಯದ ಒಪ್ಪಂದ ಕರಾರು ಪತ್ರವನ್ನು ನೋಡಿರುತ್ತೇನೆ. ಅದನ್ನು ಬರೆಯುವಾಗ ನಾನು ಇದ್ದಿರುತ್ತೇನೆ. ಸದರಿ ನೋಂದಾಯಿತ ಕ್ರಯದ ಒಪ್ಪಂದ ಕರಾರು ಪತ್ರವನ್ನು ಮಾಡುವ ಸಮಯದಲ್ಲಿ 5 ಲಕ್ಷ ಅಸಲು ಹಾಗೂ ಬಡ್ಡಿ ಭದ್ರತೆಗಾಗಿ ಸದರಿ ಪತ್ರವನ್ನು ಮಾಡುತ್ತಿದ್ದ ಬಗ್ಗೆ ಮಾತುಕತೆಯಾಗಿರುತ್ತದೆ. ಸದರಿ ಹಣಕಾಸಿನ ವ್ಯವಹಾರದ ಬಗ್ಗೆ 2019 ನೇ ಇಸವಿಯ ಮಾರ್ಚ್-ಏಪ್ರೀಲ್ ತಿಂಗಳಿನಲ್ಲಿ ಮಾತುಕತೆಯಾಗಿರುತ್ತದೆ. ಸದರಿ ಕ್ರಯದ ಒಪ್ಪಂದ ಕರಾರು ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಪಿರ್ಯಾದದಾರರ ಅಣ್ಣನಾದ ರಾಮು ರವರು ಹೂಡಿದ ಅಸಲು ದಾವಾ ನಂ.27/2020 ರಲ್ಲಿ ನನಗೆ ಸಾಕ್ಷಿದಾರನಾಗಿ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇದ್ದಿರಲಿಲ್ಲ ಎಂದರೆ ಸರಿ.ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಕ್ರಯದ ಒಪ್ಪಂದ ಕರಾರು ಪತ್ರವನ್ನು ರದ್ದು ಮಾಡುವನತೆ ಯಾವುದೇ ನೋಟಿಸ್‌ಅನ್ನು ನೀಡಿರುವುದಿಲ್ಲ. ಸದರಿ ಕ್ರಯದ ಒಪ್ಪಂದ ಕರಾರು ಪತ್ರದಲ್ಲಿ ಯಾವ ಯಾವ ದಾಖಲೆಗಳನ್ನ ನೀಡಿರುತ್ತೇವೆ ಎಂಬುದನ್ನು ಬರೆಸಿರುವುದಿಲ್ಲ. ಅದೇ ರೀತಿ ನಿಪಿ-1 ರ ಚೆಕ್ ಅನ್ನು ಭದ್ರತೆಗಾಗಿ ಕೊಟ್ಟಿರುವುದಾಗಿ ಯಾವುದೇ ಪತ್ರದಲ್ಲಿ ಬರೆಸಿಕೊಂಡಿರುವುದಿಲ್ಲ. ನಾನು ಪಿರ್ಯಾದಿಗೆ ಕೊಡಬೇಕಾಗಿದ್ದ ಚೆಕ್ಕಿನ ಹಣ ಹಣವನ್ನು ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಕತೆಯನ್ನು ಕಟ್ಟಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಜೊತೆ ಹಾಜರುಪಡಿಸಿದ ಅಸಲು ದಾವಾ ನಂ.27/2020 ರ ದಾವೆಯಲ್ಲಿ ನಾನು ಯಾವುದೇ ಪಕ್ಷಗಾರನಾಗಿರುವುದಿಲ್ಲ ಎಂದರೆ ಸರಿ. ನಾನು ನನ್ನ ಅಣ್ಣ ಹಾಗೂ ಅವರ ಕುಟುಂಬದವರು ಸೇರಿಕೊಂಡು ನಾನು ಪಿರ್ಯಾದಿಯಿಂದ ಪಡೆದುಕೊಂಡ ಹಣದ ಭಾದ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮುಖ್ಯ ವಿಚಾರಣೆಯ

ಅಂಶವನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಗೆ ನಿಪಿ-1 ರಲ್ಲಿ ಇರುವ ಹಣದ ಭಾಧ್ಯತೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**